**ಸಿಸಿ ನಂ:1888/2022**
**ಪಿ.ಡಬ್ಲ್ಯೂ: 01**

**ದಿನಾಂಕ:16–09–2025 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲು: ಶ್ರೀ ಕೆ ಜಿ ಎಸ್ ., ಆರೋಪಿ ಪರ ವಕೀಲರಿಂದ**

3. ನಾನು ರಿಯಲ್ ಎಸ್ಟೇಟ್ ವ್ಯಾಪಾರ ಮಾಡುವ ಸಂಬಂಧ ನ್ಯಾಯಾಲಯಕ್ಕೆ ದಾಖಲೆಗಳನ್ನು ಹಾಜರುಪಡಿಸಿಲ್ಲ. ನಾನು ಆರೋಪಿಯ ಮನೆಯನ್ನು ಖುದ್ದು ನೋಡಿರುತ್ತೇನೆ. ಆರೋಪಿಯ ಮನೆ ತರೀಕೆರೆ ಕೊಡಿ ಕ್ಯಾಂಪ್ ಬಳಿ ಇರುತ್ತದೆ. ಆರೋಪಿಯು ಪ್ರಸ್ತುತವಾಗಿ ಎಲ್ಲಿ ವಾಸ ಇರುತ್ತಾರೆ ಎಂದು ನನಗೆ ಮಾಹಿತಿ ಇಲ್ಲ. ಆರೋಪಿಯು ನನ್ನ ಸ್ನೇಹಿತ ಪ್ರವೀಣನಿಂದ ಪರಿಚಯಸ್ಥ. ಸದರಿ ವಿಚಾರವಾಗಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಆರೋಪಿಗೆ ವಕೀಲರ ಮುಖಾಂತರ ಲೀಗಲ್ ನೋಟೀಸ್ ಕಳುಹಿಸಲು ನಾನೇ ಖುದ್ದು ಮನೆ ನೋಡಿದ್ದರಿಂದ ವಿಳಾಸ ತಿಳಿದಿರುತ್ತದೆ. ಪ್ರಕರಣವನ್ನು ದಾಖಲಿಸುವ ಮುಂಚಿತವಾಗಿಯೇ ನಾನು ಆರೋಪಿಯ ಮನೆಯನ್ನು ನೋಡಿರುತ್ತೇನೆ. ಸದರಿ ವಿಚಾರವಾಗಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಆರೋಪಿಯ ದೂರವಾಣಿ ಸಂಖ್ಯೆ ನನಗೆ ನೆನಪಿಲ್ಲ.

4. ಆರೋಪಿಯನ್ನು ತರೀಕೆರೆಯಲ್ಲಿ ನಾನು ಮೊದಲಬಾರಿಗೆ ನೋಡಿರುತ್ತೇನೆ. ನಾನು ಮತ್ತು ಬಿರೂರಿನ ಪ್ರವೀಣ ಸ್ನೇಹಿತರು. ಆರೋಪಿಯೊಂದಿಗೆ ವ್ಯವಹಾರ ಆಗುವ 3–4 ವರ್ಷಗಳಿಂದ ಪೂರ್ವದಿಂದ ಪ್ರವೀಣ ಪರಿಚಯಸ್ಥ. ಆರೋಪಿಯ ಮನೆಯಲ್ಲಿ ಎಷ್ಟು ಜನ ಇರುತ್ತಾರೆ ಎಂದು ನನಗೆ ಹೇಳಲು ಆಗುವುದಿಲ್ಲ. ಆರೋಪಿಯು ಗೃಹಿಣಿ. ಆರೋಪಿಗೆ ಇರುವ ಆಸ್ತಿಗಳ ಬಗ್ಗೆ ನನಗೆ ಮಾಹಿತಿ ಇಲ್ಲ. ಆರೋಪಿ ವಾಸ ಇರುವ ಮನೆ ಸ್ವಂತ ಅಥವಾ ಬಾಡಿಗೆ ಎಂಬುದರ ಬಗ್ಗೆ ನನಗೆ ಮಾಹಿತಿ ಇಲ್ಲ. ಆರೋಪಿಯ ಮನೆಯನ್ನು ಪ್ರವೀಣ ಮತ್ತು ಆರೋಪಿಯ ಗಂಡ ಕೃಷ್ಣಮೂರ್ತಿಯವರು ತೋರಿಸಿರುತ್ತಾರೆ. ಆದರೆ ದಿನಾಂಕ ನೆನಪಿಲ್ಲ. ಸದರಿ ವಿಚಾರವಾಗಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

5. ಆರೋಪಿಯು ವಾಹನವನ್ನು ಖರೀದಿಸಲು ಹಣದ ಅವಶ್ಯಕತೆ ಇದೆ ಎಂದು ಸಾಲವನ್ನು ಪಡೆದಿರುತ್ತಾರೆ. ಸದರಿ ವಿಚಾರವಾಗಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಸದರಿ ವಿಚಾರವನ್ನು ಲೀಗಲ್ ನೋಟೀಸ್‌ಲ್ಲಾಗಲೀ ಅಥವಾ ಪಿರ್ಯಾದಿಯಲ್ಲಾಗಲೀ ಹೇಳಿ ಬರೆಸಿಲ್ಲ. ಆರೋಪಿಯ ಹಾಗೂ ಆಕೆಯ ಗಂಡ ಯಾವುದೇ ಟ್ರಾವೇಲ್ಸ್ ವ್ಯವಹಾರ ಮಾಡುವುದಿಲ್ಲ ಎಂದರೆ ಸಾಕ್ಷಿಯು ವ್ಯವಹಾರ ಆಗುವ ಸಮಯದಲ್ಲಿ ಮಾಡುತ್ತಿದ್ದರು ಎಂದು ನುಡಿಯುತ್ತಾರೆ.

6. ನನ್ನ ಸ್ನೇಹಿತ ಪ್ರವೀಣ ಬೆಂಗಳೂರಿನಲ್ಲಿ ಕೆಲಸ ಮಾಡುತ್ತಿದ್ದರು. ನನ್ನ ಸ್ನೇಹಿತ ಪ್ರವೀಣ ರೈಲ್ವೆ ನಿಲ್ದಾಣದಲ್ಲಿ ಗುತ್ತಿಗೆ ಆಧಾರದ ಮೇಲೆ ಕೆಲಸ ನಿರ್ವಹಿಸುತ್ತಿದ್ದಾನೆ. ಸದರಿ ವಿಚಾರವಾಗಿ ಸುಳ್ಳು ಸಾಕ್ಷ್ಯ

ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಿಪಿಃ1ರ ಚೆಕ್ ನ್ನು ಆರೋಪಿ ಹಾಗೂ ಆಕೆಯ ಗಂಡನ ಮುಖಾಂತರ ಪಡೆದಿರುತ್ತೇನೆ. ಚೆಕ್ ನೀಡುವ ಸಂದರ್ಭದಲ್ಲಿ ಯಾವುದೇ ರೀತಿಯ ಕರಾರನ್ನು ಮಾಡಿಕೊಂಡಿರುವುದಿಲ್ಲ. ರೂ.4 ಲಕ್ಷ ಹಣವನ್ನು ಆರೋಪಿಗೆ ಸದರಿಯವರ ಮನೆಯಲ್ಲಿ ನೀಡಿರುತ್ತೇನೆ. ರೂ.4 ಲಕ್ಷ ಹಣವನ್ನು ನಗದು ರೂಪದಲ್ಲಿ ತೆಗೆದುಕೊಂಡು ಹೋಗಿರುತ್ತೇನೆ. ನನ್ನ ಹತ್ತಿರ ರೂ.2 ಲಕ್ಷ ಹಣ ಇದ್ದು ಮತ್ತು ಉಳಿದ ಹಣವನ್ನು ನನ್ನ ಇತರೆ ಸ್ನೇಹಿತರಿಂದ ಪಡೆದಿರುತ್ತೇನೆ. ನನ್ನ ಹತ್ತಿರ ಇದ್ದ ಸದರಿ ರೂ.2 ಲಕ್ಷ ಗಳು ನನ್ನ ಮನೆಯಲ್ಲಿ ಇತ್ತು. ನನ್ನ ಬ್ಯಾಂಕ್ ಪಾಸ್ ಪುಸ್ತಕವನ್ನು ನ್ಯಾಯಾಲಯಕ್ಕೆ ಹಾಜರುಪಡಿಸಲು ನನಗೆ ಯಾವುದೇ ತೊಂದರೆ ಇಲ್ಲ. ರೂ.4 ಲಕ್ಷ ಹಣವನ್ನು ದಿಃ20-12-2021 ರಂದು ಸಂಜೆ ಸಮಯದಲ್ಲಿ ನೀಡಿರುತ್ತೇನೆ. ಸದರಿ ವಿಚಾರವಾಗಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಹಣವನ್ನು ನೀಡಲು ನಾನು ಒಬ್ಬನೇ ಹೋಗಿರುತ್ತೇನೆ. ಆರೋಪಿ ಮನೆಯ ಚೆಕ್ ಬಂದಿ ನನಗೆ ಗೊತ್ತಿಲ್ಲ.

7. ನಿಪಿಃ1ರ ಚೆಕ್ ನಂ.178744. ಚೆಕ್ ನಗದೀಕರಣವಾಗದೇ ದಿಃ31-01-2022 ರಂದು ಖಾತೆಯಲ್ಲಿ ಸಾಕಷ್ಟು ಹಣವಿಲ್ಲದ ಕಾರಣ ಹಿಂದುರುಗಿರುತ್ತದೆ. ಸದರಿ ವಿಚಾರವಾಗಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಂತರ ವಕೀಲರನ್ನು ದಿಃ07-02-2022 ರಂದು ಸಂಪರ್ಕಿಸಿ ಅದೇ ದಿನ ನೋಟೀಸ್ ನ್ನು ಜಾರಿ ಮಾಡಿರುತ್ತೇನೆ. ನಿಪಿಃ1ರ ಚೆಕ್ ನ ಮೇಲೆ ದಿಃ24-01-2022 ಎಂದು ನಮೂದು ಇದೆ. ನಿಪಿಃ1ರ ಚೆಕ್ ನ ಮೇಲೆ ಆರೋಪಿಯು ನನ್ನ ಹೆಸರು, ದಿನಾಂಕ ಮತ್ತು ಹಣವನ್ನು ಬರೆಯಿಸಿ ತಂದಿರುತ್ತಾರೆ ಹಾಗೂ ನನ್ನ ಮುಂದೆ ಸಹಿ ಹಾಕಿರುತ್ತಾರೆ. ಸದರಿ ವಿಚಾರವಾಗಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಿಪಿಃ1ರ ಚೆಕ್ ನ ಮೇಲಿನ ದಿನಾಂಕದಂದು ನಗದೀಕರಣಕ್ಕಾಗಿ ಬ್ಯಾಂಕಿಗೆ ಸಲ್ಲಿಸಿರುತ್ತೇನೆ. ನಿಪಿಃ1ರ ಚೆಕ್ ನ್ನು ಆರೋಪಿಯು ನೀಡಿದಾಗಿನಿಂದ ನಗದೀಕರಣಕ್ಕೆ ಸಲ್ಲಿಸುವರೆಗೂ ಒಂದು ತಿಂಗಳು ಆಗಿರಬಹುದು. ಆರೋಪಿಗೆ ಹಣ ನೀಡದ ಬಗ್ಗೆಯಾಗಲೀ ಅಥವಾ ಚೆಕ್ ನ್ನು ಪಡೆದ ಬಗ್ಗೆ ಆಗಲೀ ಎಲ್ಲೂ ಲಿಖಿತ ರೂಪದಲ್ಲಿ ಬರವಣಿಗೆ ಮಾಡಿಲ್ಲ.

**(ಈ ಹಂತದಲ್ಲಿ ಆರೋಪಿಯ ಪರ ವಕೀಲರು ಸಮಯಾವಕಾಶ ಕೋರಿದ್ದು, ಸಕಾರಣಗಳು ಇಲ್ಲದಿದ್ದರಿಂದ ಹಾಗೂ ಮಧ್ಯಂತರ ಅರ್ಜಿಯ ಆದೇಶದ ಮೇಲೆ ಸದರಿ ಪಾಟೀ ಸವಾಲು ನಡೆದಿದ್ದರಿಂದ ಆರೋಪಿ ಪರ ವಕೀಲರನ್ನು ಪ್ರಾರ್ಥನೆಯನ್ನು ನಿರಾಕರಿಸಿ, ಮುಂದುವರೆದ ಪಾಟೀ ಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು.)**

ಮರು ವಿಚಾರಣೆಃ ಇರುವುದಿಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸರಿಯಿದೆ,

ಅಪರ ಸಿವಿಲ್ ಮತ್ತು ಜೆ.ಎಂ.ಎಫ್.ಸಿ.,
ನ್ಯಾಯಾಧೀಶರು, ಚಳ್ಳಕೆರೆ.